ದಿಃ 29.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಎ.ಕೆ.ಆರ್. ವಕೀಲರಿಂದ ಅರ್ಜಿದಾರರ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 09.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎ.ಕೆ.ಆರ್. ವಕೀಲರಿಂದ ಅರ್ಜಿದಾರರ ಪರವಾಗಿ

2. ಮೋಟರ್ ವಾಹನದಿಂದ ಆದ ಅಪಘಾತದ ಸೂಚನಾ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು, Cr.No.28/2022 ರ ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು, ದೂರಿನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು, ಸ್ಥಳ ಮಹಜರ್ ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು, ವಾಹನಗಳ ಐ.ಎಂ.ವಿ ವರದಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು, Cr.No.28/2022 ರಲ್ಲಿ ಪೊಲೀಸರು ಸಲ್ಲಿಸಿದ ಅಂತಿಮ ವರದಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು, ಮೃತ ರಮೇಶ್ ರವರ ಶವ ಪರೀಕ್ಷೆಯ ವರದಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.7 ಎಂದು, ನನ್ನ, 2 ರಿಂದ 4 ನೇ ಅರ್ಜಿದಾರರ ಮತ್ತು ಮೃತ ರಮೇಶ್ ರವರ ಆಧಾರ್ ಕಾರ್ಡುಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿ.ಪಿ.8 ರಿಂದ 12 ಎಂದು, ನನ್ನ ಮತ್ತು 2 ರಿಂದ 4 ನೇ ಅರ್ಜಿದಾರರ ಪಾನ್ ಕಾರ್ಡುಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿ.ಪಿ.13 ರಿಂದ 16 ಎಂದು, ನನ್ನ ಮತ್ತು 2 ರಿಂದ 4 ನೇ ಅರ್ಜಿದಾರರ ಬ್ಯಾಂಕಿನ ಪಾಸ್ ಪುಸ್ತಕಗಳನ್ನು ಹಾಜರು ಮಾಡಿದ್ದು ಅವುಗಳನ್ನು ನಿ.ಪಿ.17 ರಿಂದ 20 ಎಂದು ಗುರುತಿಸಲಾಯಿತು.

ಪಾಟೀ ಸವಾಲು ಎದುರುದಾರರ ಪರವಾಗಿ

3. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ. ಸಮಯಾವಕಾಶ ನೀಡಲಾಗಿದೆ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ದಿಃ 30.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಹೆಚ್.ಎನ್.ಆರ್ ವಕೀಲರಿಂದ **3** ನೇ ಎದುರುದಾರರ ಪರವಾಗಿ

4. ಅಪಘಾತದ ವಿಚಾರವನ್ನು ನನಗೆ ಕರೆ ಮಾಡಿ ತಿಳಿಸಿದ್ದರು. ನಾನು ಖುದ್ದಾಗಿ ನೋಡಿಲ್ಲ. ಪೊಲೀಸರಿಗೆ ದೂರನ್ನು ನನ್ನ ಗಂಡನ ತಮ್ಮ ಹರೀಶ್ ರವರು ನೀಡಿದ್ದರು. 4 ನೇ ಅರ್ಜಿದಾರರು ನನ್ನ ಅತ್ತೆ. ನನ್ನ ಅತ್ತೆಗೆ ಇಬ್ಬರು ಗಂಡು ಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು ಇರುತ್ತಾರೆ. 4 ನೇ ಅರ್ಜಿದಾರಳು ನನ್ನ ಗಂಡನ ತಮ್ಮ ಹರೀಶ್ ಜೊತೆಯು ಇರುತ್ತಾರೆ. ರಸ್ತೆಯಲ್ಲಿ ನನ್ನ ಗಂಡ ಮತ್ತು ನನ್ನ ಗಂಡನ ತಮ್ಮ ಹರೀಶ್ ನಡೆದುಕೊಂಡು ಹೋಗುವಾಗ ಎದುರಿಗೆ ಬರುತ್ತಿರುವ ವಾಹನವನ್ನು ಗಮನಿಸದ ಕಾರಣ ಅವರ ನಿರ್ಲಕ್ಷತನದಿಂದ ಉಂಟಾಗಿದೆ ಎಂದರೆ ಸುಳ್ಳು. ಅಪಘಾತ 1 ನೇ ಎದುರುದಾರನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಶವ ಪರೀಕ್ಷೆಯನ್ನು ಸಕಲೇಶಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಮಾಡಿದ್ದರು ಎಂದರೆ ಸರಿ. ನನ್ನ ಗಂಡನ ಶವವನ್ನು ಸರ್ಕಾರಿ ಆಸ್ಪತ್ರೆಯ ಆಂಬುಲೆನ್ಸ್ ನಲ್ಲಿ ತಂದಿದ್ದರು ಎಂದರೆ ಸರಿ. ನನ್ನ ಗಂಡನನ್ನು ಆಸ್ಪತ್ರೆಯಿಂದ ಕರೆ ತರಲು ಮತ್ತು ಆತನ ಅಂತ್ಯ ಕ್ರಿಯೇ ಮಾಡಲು 2 ಲಕ್ಷ ಖರ್ಚು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.
5. ಅಪಘಾತವನ್ನು ಕಣ್ಣಾರೆ ನೋಡಿದ ಪ್ರತ್ಯಕ್ಷ ಸಾಕ್ಷಿದಾರರನ್ನು ವಿಚಾರಣೆ ಮಾಡಿಸಲು ನನಗೆ ತೊಂದರೆ ಇಲ್ಲ. ನನ್ನ ಗಂಡ ಕೇವಲ ಟಿಂಬರ್ ಲೋಡ್ ಮಾಡುವ ಕೆಲಸ ಇದ್ದಾಗ ಮಾತ್ರ ಕೆಲಸಕ್ಕೆ ಹೋಗುತ್ತಿದ್ದರು, ಯಾವಾಗಲು ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ಸುಳ್ಳು. ನನ್ನ ಗಂಡ ಟಿಂಬರ್ ಕೆಲಸ ಮಾಡಿಕೊಂಡು ದಿನಕ್ಕೆ ರೂ.1000-00 ಸಂಬಳ ಪಡೆಯುತ್ತಿದ್ದರು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ಹೆಚ್ಚಿನ ಪರಿಹಾರ ದೊರಕಲಿ ಎಂದು ನನ್ನ ಗಂಡ ಟಿಂಬರ್ ಕೆಲಸ ಮಾಡಿಕೊಂಡು ದಿನಕ್ಕೆ ಸಾವಿರ ಸಂಬಳ ಪಡೆಯುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ.

6. ನಮ್ಮ ಬಳಿ ಎ.ಪಿ.ಎಲ್ ಕಾರ್ಡು ಇರುತ್ತದೆ. ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನ್ನ ಬಳಿ ಬಿ.ಪಿ.ಎಲ್ ಕಾರ್ಡು ಇದ್ದು, ಉದ್ದೇಶ ಪೂರ್ವಕವಾಗಿ ನಾನು ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಹೆಚ್ಚಿನ ವರಮಾನವನ್ನು ತೋರಿಸುವ ಉದ್ದೇಶದಿಂದ ಬಿ.ಪಿ.ಎಲ್ ಕಾರ್ಡು ಇದ್ದರು ಸಹ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ನಮಗೆ ಆರ್ಥಿಕ ನಷ್ಟ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲು ಸಹ ನಾನು ಮತ್ತು 4 ನೇ ಅರ್ಜಿದಾರಳು ಕೆಲಸ ಮಾಡುತ್ತಿದ್ದು ನಮಗೆ ಯಾವುದೇ ಆರ್ಥಿಕ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ.

7. ಅಪಘಾತದ ಸಮಯದಲ್ಲಿ ನನ್ನ ಗಂಡನಿಗೆ 45 ವರ್ಷಕ್ಕಿಂತ ಹೆಚ್ಚಿನ ವಯಸ್ಸಾಗಿತ್ತು ಎಂದರೆ ಸಾಕ್ಷಿ 33 ವರ್ಷ ಆಗಿತ್ತು ಎಂದು ನುಡಿಯುತ್ತಾರೆ. ನನ್ನ ಗಂಡನ ವಯಸ್ಸನ್ನು ತೋರಿಸಲು ಆಧಾರ್ ಕಾರ್ಡ್ ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. 2 ನೇ ಎದುರುದಾರನ ಲಾರಿ ಯಾರಿಗೆ ಸಂಬಂಧಿಸಿದ್ದು ಎಂದು ನನಗೆ ಗೊತ್ತಿಲ್ಲ. 2 ನೇ ಎದುರುದಾರ ಲಾರಿಯ ವಿಮೇಯನ್ನು ಯಾರ ಬಳಿ ಮಾಡಿಸಿದ್ದರು ಎಂದು ನನಗೆ ಗೊತ್ತಿಲ್ಲ. 2 ನೇ ಎದುರುದಾರ ಲಾರಿಗೆ ಸಂಬಂಧಿಸಿದ 3 ನೇ ಎದುರುದಾರರ ಬಳಿ ಯಾವುದೇ ವಿಮೇಯನ್ನು ಮಾಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. 2 ನೇ ಎದುರುದಾರ Kinetic safari ಸ್ಕೂಟರ್ ಗೆ ಸಂಬಂಧಿಸಿದಂತೆ ಮಾತ್ರ ವಿಮೇಯನ್ನು 3 ನೇ ಎದುರುದಾರರ ಬಳಿ ಮಾಡಿಸಿದ್ದ ಎಂದರೆ ನನಗೆ ಗೊತ್ತಿಲ್ಲ. 3 ನೇ ಎದುರುದಾರ 2 ನೇ ಎದುರುದಾರನ ಲಾರಿ ಸಂಖ್ಯೆ ಕೆ.ಎ.10/ಬಿ.7827 ಕ್ಕೆ ವಿಮೇಯನ್ನು ನೀಡದ ಕಾರಣ ನಮಗೆ ಪರಿಹಾರವನ್ನು ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ದಾಖಲೆಗಳನ್ನು ಹಾಜರು ಪಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಶ್ರೀ ಎಂ.ವಿ.ಜೆ. ವಕೀಲರಿಂದ **1** ಮತ್ತು **2** ನೇ ಎದುರುದಾರರ ಪರವಾಗಿ</u>

8. ನನ್ನ ಗಂಡ ಮೃತಪಟ್ಟ ಬಳಿಕ ನಾನು ಪೊಲೀಸ್ ಠಾಣೆಗೆ ಹಾಜರಾಗಿ ಪೊಲೀಸ್ ಠಾಣೆಯಿಂದ ಕೆಲವು ದಾಖಲೆಗಳನ್ನು ಪಡೆದುಕೊಂಡಿದ್ದೇನೆ ಎಂದರೆ ಸರಿ. ಪೊಲೀಸರು ಲಾರಿಗೆ ವಿಮೇ ಇದೆ ಮತ್ತು ಲಾರಿಯ ಚಾಲಕನಿಗೆ ಚಾಲನ ಪರವಾನಿಗೆ ಇದೆ ಎಂದು ದಾಖಲೆಗಳನ್ನು ನೀಡಿದ್ದರು ಎಂದರೆ ಸರಿ. ಆ ದಾಖಲೆಗಳನ್ನು ನಾನು ನಮ್ಮ ವಕೀಲರಿಗೆ ನೀಡಿದ್ದೆ ಎಂದರೆ ಸರಿ. ದಾಖಲೆಗಳ ಆಧಾರದ ಮೇಲೆ 1 ರಿಂದ 3 ನೇ ಎದುರುದಾರರನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿ.

<u>ಮರುವಿಚಾರಣೆ ಇಲ್ಲ</u>

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ